# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 756

ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 11.12.2023

ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಾನವ ವನ್ಯಜೀವಿಗಳ ನಡುವೆ ನಿತ್ಯ ಸಂಘರ್ಷ ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ರಕ್ಷಣೆಗೆ ಕೈಗೊಂಡಿರುವ ಬಿಗಿಯಾದ ಕ್ರಮದಿಂದ ವನ್ಯಜೀವಿಗಳ ಸಂಖ್ಯೆ ಹೆಚ್ಚಳವಾಗಿರುವುದು ಕಾರಣವೇ; ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ವನ್ಯಪ್ರಾಣಿಗಳ ರಕ್ಷಣೆಗೆ ಕೈಗೊಂಡಿರುವ ಬಿಗಿಯಾದ ಕ್ರಮದಿಂದ ವನ್ಯಜೀವಿಗಳ ಸಂಖ್ಯೆ ಹೆಚ್ಚಳವಾಗಿದ್ದು, ಪ್ರಸ್ತುತ ಆನೆ ಮತ್ತು ಹುಲಿ ಗಣತಿಯ ಪ್ರಕಾರ ವನ್ಯಪ್ರಾಣಿಗಳ ಸಂಖ್ಯೆ ಈ ಕೆಳಕಂಡಂತಿದೆ:-<br>1. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ರವರು ಬಿಡುಗಡೆ ಮಾಡಿರುವ 2022 ರ ಹುಲಿ ಗಣತಿಯ ವರದಿಯಲ್ಲಿ ರಾಜ್ಯವು ಒಟ್ಟು 563 ಹುಲಿಗಳನ್ನು ಹೊಂದಿದ್ದು, ದೇಶದಲ್ಲೇ ಹುಲಿಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದೆ.<br>2. 2023ರಲ್ಲಿ ನೇರ ವೀಕ್ಷಣೆಯಿಂದ ನಡೆಸಲಾದ ಆನೆ ಗಣತಿಯಲ್ಲಿ ರಾಜ್ಯವು ಒಟ್ಟು 3695 ಆನೆಗಳನ್ನು ಹೊಂದಿದ್ದು, ದೇಶದಲ್ಲೇ ಆನೆಗಳ ಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. |
| ಆ) | ರಾಜ್ಯದಲ್ಲಿ ಅರಣ್ಯ ಪ್ರದೇಶದ ಸೆರಗಿನಲ್ಲಿರುವ ಹಳ್ಳಿಗಳು/ ಪಟ್ಟಣಗಳಿಗೆ ವನ್ಯಪ್ರಾಣಿಗಳು ನುಗ್ಗಿ, ಜಾನುವಾರು ಮತ್ತು ಜನರನ್ನು ಕೊಂದು ಸಾಯಿಸುತ್ತಿರುವುದು ಬಹುಶಃ ಈ ವನ್ಯ ಪ್ರಾಣಿಗಳಿಗೆ ತಮ್ಮ ಅನಾದಿಕಾಲದಿಂದ ಇದ್ದ ಮಾರ್ಗಗಳಲ್ಲಿ / ಜಾಡುಗಳಲ್ಲಿ ಅಡೆ-ತಡೆ ಒಡ್ಡುವ ಜಮೀನು ಮತ್ತು ಹಳ್ಳಿಗಳು/ ಗ್ರಾಮಗಳು ತಲೆ ಎತ್ತಿ ನಿಂತಿರುವುದರಿಂದ ಇಂತಹ ಘಟನೆಗಳಿಗೆ ಕಾರಣಗಳಾಗಿವೆಯೇ; ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು; | ವನ್ಯಜೀವಿಗಳು ಅದರಲ್ಲೂ ಪ್ರಮುಖವಾಗಿ ಆನೆಯಂತಹ ವನ್ಯಪ್ರಾಣಿಯು ಗುರುತಿಸಿರುವ ಮೊಗಸಾಲೆಯಲ್ಲಿ (ಕಾರಿಡಾರ್) ಸಂಚರಿಸುತ್ತವೆ. ಕಾಲ ಕ್ರಮೇಣ ಇಂತಹ ಕಾರಿಡಾರ್‌ಗಳು ಈ ಕೆಳಕಂಡ ಕಾರಣಗಳಿಂದ ಛಿದ್ರೀಕರಣವಾಗಿರುವುದರಿಂದ ಮಾನವ-ವನ್ಯಪ್ರಾಣಿ ಸಂಘರ್ಷ ಉಂಟಾಗುತ್ತದೆ:-<br>1. ಅಭಿವೃದ್ಧಿ ಚಟುವಟಿಕೆಗಳು ಮತ್ತು ಕೃಷಿಯ ಹರಡುವಿಕೆಯಿಂದಾಗಿ ಅರಣ್ಯ ಆವಾಸಸ್ಥಾನಗಳ ವಿಘಟನೆ.<br>2. ಅರಣ್ಯ ಪ್ರದೇಶಗಳ ಅಂಚಿನಲ್ಲಿರುವ ಖಾಸಗಿ ಜಮೀನುಗಳಲ್ಲಿ ಕಾಡಾನೆ ಒಳಗೊಂಡಂತೆ ಇತರೆ ವನ್ಯಪ್ರಾಣಿಗಳನ್ನು ಆಕರ್ಷಿಸುವ ಬೆಳೆಗಳಾದ ಭತ್ತ, ತೆಂಗು, ಬಾಳೆ, ಹಲಸು ಇತ್ಯಾದಿ ಬೆಳೆಗಳನ್ನು ಬೆಳೆಸುವುದರಿಂದ ವನ್ಯಪ್ರಾಣಿ ದಾಳಿ ಹೆಚ್ಚಳ ಆಗುತ್ತಿರುವುದು ಗಮನಕ್ಕೆ ಬಂದಿದೆ.<br>3. ಆನೆ ವಲಯ ಪ್ರದೇಶಗಳಲ್ಲಿನ ಭೂ ಪ್ರದೇಶಗಳಲ್ಲಿನ ಬದಲಾವಣೆ.<br>4. ಕಾಡಾನೆಗಳು ಹಿಂದಿನಿಂದಲೂ ಸಂಚರಿಸುತ್ತಿದ್ದ ದಾರಿಗಳಿಗೆ (ಮೊಗಸಾಲೆಗಳಿಗೆ) ಅಡಚಣೆ ಉಂಟಾಗಿರುತ್ತದೆ.<br>5. ಹೆಚ್ಚಿನ ಸಂಖ್ಯೆಯಲ್ಲಿ ತಲೆಯೆತ್ತುತ್ತಿರುವ ಪ್ರವಾಸಿ ಚಟುವಟಿಕೆಗಳು.<br>ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅರಣ್ಯ ಪ್ರದೇಶಗಳಲ್ಲಿ ಹೆಚ್ಚು ರಸ್ತೆ, ರೈಲ್ವೆ, ಜಲಾಶಯ ಮತ್ತು ವಿದ್ಯುತ್ ಮಾರ್ಗಗಳನ್ನು ನಿರ್ಮಿಸುತ್ತಿರುವುದು. |

| | | |
|---|---|---|
| ಇ) | ರಾಜ್ಯದಲ್ಲಿ ಘೋಷಿತ ವನ್ಯಜೀವಿ ಅರಣ್ಯ ಪ್ರದೇಶಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ರೈಲ್ವೇ ಮಾರ್ಗಗಳು ಹಾದು ಹೋಗುತ್ತಿದ್ದು, ವನ್ಯಜೀವಿಗಳ ಮಾರ್ಗಗಳಲ್ಲಿ/ ಜಾಡುಗಳಲ್ಲಿ ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಅಡಚಣೆ ನಿವಾರಿಸಲು ಕೈಗೊಂಡ ಕ್ರಮಗಳು ಯಾವುವು; ಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ಸಂರಕ್ಷಿತ ಪ್ರದೇಶಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ರೈಲ್ವೇ ಮಾರ್ಗಗಳು ಹಾದು ಹೋಗುತ್ತಿದ್ದು, ವನ್ಯಜೀವಿಗಳ ಮಾರ್ಗಗಳಲ್ಲಿ/ ಜಾಡುಗಳಲ್ಲಿ ಅಡಚಣೆ ಉಂಟಾಗುತ್ತಿದ್ದು, ಇದನ್ನು ತಡೆಯಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br><br>1. ರೈಲ್ವೆ/ರಸ್ತೆ ಮತ್ತು ವಿದ್ಯುತ್ ಮಾರ್ಗದಲ್ಲಿ ವನ್ಯಪ್ರಾಣಿಗಳು ಸಾವನ್ನಪ್ಪುವ ಪ್ರಕರಣಗಳನ್ನು ಕಡಿಮೆಗೊಳಿಸಲು ಕೇಂದ್ರ ಸರ್ಕಾರವು "Eco- Friendly measures to mitigate impacts of linear infrastructure on wild life" ಮಾರ್ಗಸೂಚಿಯನ್ನು ತಯಾರಿಸಿದ್ದು, ಸದರಿ ಮಾರ್ಗಸೂಚಿಯನ್ವಯ ರೈಲ್ವೇ, ವಿದ್ಯುತ್ ಮಾರ್ಗ ಮತ್ತು ರಸ್ತೆಯಂತಹ ಯೋಜನಾ ಪ್ರಸ್ತಾವನೆಗಳಲ್ಲಿ ವನ್ಯಜೀವಿಗಳ ಸುಗಮ ಸಂಚಾರಕ್ಕೆ ಅಗತ್ಯವಾದ ಉಪಶಮನ ಕ್ರಮಗಳನ್ನು (mitigation measures) ಕೈಗೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.<br>2. ರೈಲ್ವೆ ಮಾರ್ಗಗಳಲ್ಲಿ ಆನೆ ಮತ್ತು ಇತರೆ ವನ್ಯಪ್ರಾಣಿಗಳು ಸಾವನ್ನಪ್ಪುವ ಪ್ರದೇಶಗಳನ್ನು ಗುರುತಿಸಿ ಸದರಿ ಪ್ರದೇಶಗಳಲ್ಲಿ ಅಗತ್ಯವಾದ ಉಪಶಮನ ಕ್ರಮಗಳನ್ನು (mitigation measures) ಕೈಗೊಳ್ಳುವಂತೆ ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗಿದೆ.<br>3. ವಿದ್ಯುತ್ ಸ್ಪರ್ಶದಿಂದ ವನ್ಯಪ್ರಾಣಿಗಳು ಸಾವನ್ನಪ್ಪುವ ಪ್ರಕರಣಗಳನ್ನು ಕಡಿಮೆಗೊಳಿಸಲು ಆನೆ ಕಾರಿಡಾರ್ ಮತ್ತು ಇತರೆ ಸಂರಕ್ಷಿತ ಪ್ರದೇಶಗಳಲ್ಲಿನ ಬಾಗಿದ ವಿದ್ಯುತ್ ತಂತಿಗಳನ್ನು ಸುಸ್ಥಿತಿಯಲ್ಲಿಡಲು ಎಲ್ಲಾ ವಿದ್ಯುತ್ ಕಂಪನಿಗಳಿಗೆ ಪತ್ರದ ಮೂಲಕ ವ್ಯವಹರಿಸಲಾಗಿದೆ. |

ಕಡತ ಸಂ;ಅಪಜೀ 136 ಎಫ್‌ಡಬ್ಲ್ಯೂಎಲ್ 2023(ಇ)

(ಈಶ್ವರ ಬಿ. ಖಂಡ್ರೆ)
ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು